ನೀರಾವರಿ ಯೋಜನೆಗಳ ಬಗ್ಗೆ

762 - ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಮಧ್ಯಮ ಮತ್ತು ಭಾರಿ ನೀರಾವರಿಗೆ ಎಷ್ಟು ನೀರಾವರಿ ಯೋಜನೆಗಳು ಒಳಪಟ್ಟಿವೆ? (ಹೆಸರುಗಳನ್ನು ತಿಳಿಸುವುದು)*

ಆ) *ಹೇಮಾವತಿ ನದಿಯ ನೀರನ್ನು ತುಮಕೂರು ಜಿಲ್ಲೆಗೆ ಹರಿಸುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?*

ಇ) *ಕೊರಟಗೆರೆ ತಾಲ್ಲೂಕಿಗೆ ಹೇಮಾವತಿ ನದಿ ನೀರನ್ನು ಹರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಇದ್ದರೆ ಇದು ಯಾವ ಹಂತದಲ್ಲಿದೆ?*

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಮಧ್ಯಮ ನೀರಾವರಿ ಯೋಜನೆಗಳು 77

ಭಾರಿ ನೀರಾವರಿ ಯೋಜನೆಗಳು 30

ಇವೆಲ್ಲವುಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ಹೇಮಾವತಿ ಯೋಜನೆಯಿಂದ ತುಮಕೂರು ಶಾಖಾ ನಾಲೆ, ನಾಗಮಂಗಲ ಶಾಖಾ ನಾಲೆ ಮುಖಾಂತರ ತುಮಕೂರು ಜಿಲ್ಲೆಯ 3,21,172 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ ಇದೆ. ತುಮಕೂರು ಶಾಖಾ ನಾಲೆಯ ಕಾಮಗಾರಿಗಳು 185ನೇ ಕಿ.ಮೀ. ವರೆಗೆ ಪ್ರಗತಿಯಲ್ಲಿದ್ದು 131ನೇ ಕಿ.ಮೀ.ವರೆಗೆ ನಾಲಾ ಅಗೆತ ಹಾಗೂ ಏರಿ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ಹಾಗೂ ಭೂಮಿ ಅಭಿವೃದ್ಧಿ ಚಟುವಟಿಕೆಗಳ ಸಲುವಾಗಿ ನೀರನ್ನು 94-95ನೇ ಸಾಲಿನಿಂದ ಬಿಡಲಾಗುತ್ತಿದೆ. ನಾಗಮಂಗಲ ಶಾಖಾ ನಾಲೆಯ ಕಾಮಗಾರಿಗಳು 67ನೇ ಕಿ.ಮೀ. ವರೆಗೆ ಪ್ರಗತಿಯಲ್ಲಿದ್ದು, 42ನೇ ಕಿ.ಮೀ. ವರೆಗೆ ನಾಲಾ ಅಗೆತ ಹಾಗೂ ಏರಿ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ಹಾಗೂ ಭೂಮಿ ಅಭಿವೃದ್ಧಿ ಚಟುವಟಿಕೆಗಳ ಸಲುವಾಗಿ 94-95ನೇ ಸಾಲಿನಿಂದ ನೀರನ್ನು ಬಿಡಲಾಗುತ್ತಿದೆ.

ಇ) ಕೊರಟಗೆರೆ ತಾಲ್ಲೂಕಿನ ಪ್ರದೇಶವು ಹೇಮಾವತಿ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಇಲ್ಲದಿರುವುದರಿಂದ ಕೊರಟಗೆರೆ ತಾಲ್ಲೂಕಿಗೆ ಹೇಮಾವತಿ ನೀರನ್ನು ಹರಿಸುವ ಯಾವ ಯೋಜನೆಯು ಇರುವುದಿಲ್ಲ.

I KRISHNA BASIN

A COMPLETED MAJOR PROJECTS

1 Ghataprabha I & II
2 Tungabhadra RB LLC
3 Vijayanagar Channels

COMPLETED MEDIUM PROJECTS

4 Tunga Anicut
5 Vanivilas sagar
6 Ambligola
7 Anjanapura
8 Areshankar
9 Bhadra Anicut
10 Chandrampalli
11 Chitwadgi
12 Dharma
13 Gayathri
14 Gokak Canal
15 Hagaribommanahalli
16 Hatikuni
17 Jambadahalla
18 Kalaskop
19 Kanakanala
20 Kalchi Weir
21 Nagathana
22 Narayanapur
23 Narihalla
24 Rajolibunda
25 Ramanahalli
26 Soudagar

B ON GOING MAJOR PROJECTS

1 Bennithora
2 Bhadra
3 Bhima Lift
4 Dudhganga
5 Ghataprabha-III
6 Hipparagi
7 Malaprabha
8 TB LBC
9 TB RB HLC
10 U.K.P Stage-I
11 U.K.P Stage-II
12 Upper Tunga

ON-GOING MEDIUM PROJECTS

13 Amarja
14 Basapura Lift
15 F.C. to Ranikere
16 Gandhorinala
17 Hirehalla
18 Hodirayanhalla
19 Lower Mullamari
20 Maskinala
21 Itagi Sasalvad Lift
22 Upper Mullamari

C NEW MAJOR PROJECTS

1 Markendeya
2 Ramthala Lift
3 Singatlur

NEW MEDIUM PROJECT

4 Harinala

D GODAVARI DIVERSION SCHEME MEDIUM PROJECTS

1 Bhima Flow

2 Kagna

II CAUVERY BASIN

A COMPLETED MAJOR PROJECTS

1 Anicut Channels

2 K.R. Sagar

3 Nugu

COMPLETED MEDIUM PROJECTS

4 Byramangala

5 Chikkahole

6 Gundal

7 Hebballa

8 Kanva

9 Mangala

10 Markonahalli

11 Nallur Amanikere

12 Suvernavathy

B ON-GOING MAJOR PROJECTS

1 D.D. Urs Canal

2 Harangi

3 Hemavathy

4 Kabini

5 K.R.S. Modn.

6 Yagachi

ON-GOING MEDIUM PROJECTS

7 Arkavathy

8 Chiklihole

9 Huchannakoplu L.I.S.

10 Iggalur

11 Kamasamudra L.I.S.

12 Manchanabele

13 Taraka

14 Uduthorehalla

15 Votehole

C NEW MAJOR PROJECTS

Nil

NEW MEDIUM PROJECTS

1 Changawadi

2 K.R.S. Extension

3 Lakshman Thirtha

4 Lokapavani

5 Purigali L.I.S

6 Nanjapur L.I.S

7 Shima Modernisation

8 Badanavalu

9 Banahalli L.I.S

10 Kadenahalli L.I.S.

III GODAVARI BASIN

A COMPLETED PROJECTS

-Nil-

B ON-GOING MAJOR PROJECTS

1 Karanja

	ON-GOING MEDIUM PROJECTS	**ON-GOING MEDIUM PROJECTS**
2	Chulkinala	-Nil-
C	**NEW MAJOR PROJECTS**	**C NEW MAJOR PROJECTS**
	-Nil-	1 Swarna
	NEW MEDIUM PROJECTS	**NEW MEDIUM PROJECTS**
1	Manjra Lift	2 Gurupur
IV	**OTHER BASINS**	3 Kalinadi
A	**COMPLETED MAJOR PROJECTS**	4 Kallur
	-Nil-	5 Mahadayi Diversion
	COMPLETED MEDIUM PROJECTS	6 Mulky
1	Bachanki (West flowing)	7 Nerihole
2	Teetha (North Pennor)	8 Payasvani
B	**ON-GOING MAJOR PROJECTS**	9 Shalmal
1	Varahi (West flowing)	10 Sharavathy

ABSTRACT :

1	Medium Irrigation Projects	77 Nos.
2	Major Irrigation Projects	30 No.s
	Total	**107 Nos.**

ಕೊರಟಗೆರೆ ತಾಲ್ಲೂಕಿನಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವುದು

763 - ಶ್ರೀ ಸಿ. ಚಿನ್ನಿಗಪ್ಪ (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು?

ಆ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಕೋಳಾಲದಲ್ಲಿ ಹೊಸ ಆರಕ್ಷಕ ಠಾಣೆಯನ್ನು ತೆರೆಯಲು ಆದೇಶವಾಗಿದ್ದರೂ ಇದುವರೆವಿಗೂ ತೆರೆಯದಿರಲು ಕಾರಣವೇನು?